ದಿಕ್ಕಿನಲ್ಲಿ ಯಾರಿಗೆ ದೇವರ ಬಗ್ಗೆ ಸರಸ್ವತಿ ಬಗ್ಗೆ ನಂಬಿಕೆ ಇದೆ ಅಂತಹವರಿಗೆ ದ್ರೋಹ ಮಾಡಿದ್ದಾರೆ. ಅವರಿಗೆ ಅಪಮಾನ ಮಾಡಿದ್ದಾರೆ ಆದ್ದರಿಂದ ಅವರು ಇಡೀ ದೇಶದ ಕ್ಷಮೆ ಕೇಳಬೇಕೆಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಕಾಂಗ್ರೆಸ್ ಮತ್ತು ಭಾರತೀಯ ಜನತಾ ಪಕ್ಷ ಎರಡೂ ಕೂಡ ಇವತ್ತು ಅವಿಶ್ವಾಸ ನಿರ್ಣಯ ಮಂಡನೆ ಮಾಡಿದ್ದೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಏಕೆ ಕೇಳಬೇಕೆಂದು ಜನ ಹೇಳುತ್ತಾರೆ.

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ಸಚಿವರು) : ನಾಚಿಕೆ ಮಾನ ಮರ್ಯಾದೆ ಇದೆಯಾ? ನಿಮಗೆ ಬಾಯಿಗೆ ಬಂದ ಹಾಗೆ ಮಾತನಾಡುತ್ತೀರಿ.

(ಗೊಂದಲ)

ಅಧ್ಯಕ್ಷರು : ಸರಸ್ವತಿ ಸದನ ಪ್ರವೇಶ ಮಾಡಿದ ಸಮಯ ಸರಿ ಇಲ್ಲ. ಬಹಳ ಘರ್ಷಣೆಯಾಗುತ್ತಿದೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, I have not heard his speech ....

ಶ್ರೀ ಆರ್. ರೋಷನ್ ಬೇಗ್ : ಏನು ಕ್ಷಮೆ ಕೇಳಬೇಕು, ಯಾರಿಗೆ ಕ್ಷಮೆ ಕೇಳಬೇಕು, ಯಾರು ನೀವು ಕ್ಷಮೆ ಕೇಳುವುದಕ್ಕೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅದಕ್ಕೆ ನಾಳೆ ಅವಕಾಶ ಕೊಡಿ ನಾನು ಮಾತನಾಡುತ್ತೇನೆ ಅವರು ಏನು ಹೇಳಿದ್ದಾರೆ, ಬೇರೆಯವರು ಏನು ಹೇಳಿದ್ದಾರೆ, ಎಲ್ಲರೂ ಏನೇನು ಹೇಳಿದ್ದಾರೆ ಅದು ನನ್ನ ಹತ್ತಿರ ಇದೆ ನಾಳೆ ಉತ್ತರ ಕೊಡುತ್ತೇನೆ.

ಪ್ರಶ್ನೋತ್ತರಗಳು

ಚುಕ್ಕೆ ಗುರ್ತಿನ ಹಾಗೂ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಮಂಡಿಸುವುದು.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಮತ್ತು ವಾರ್ತಾ ಮತ್ತು ಪ್ರಚಾರ ಇಲಾಖೆ) : ಮಾನ್ಯ ಅಧ್ಯಕ್ಷರೆ, ದಿನಾಂಕ 2.11.98ರ 15 ಪ್ರಶ್ನೆಗಳ ಪೈಕಿ 9 ಪ್ರಶ್ನೆಗಳ ಉತ್ತರಗಳನ್ನು ಲಿಖಿತ ಮೂಲಕ ಉತ್ತರಿಸುವ 120 ಪ್ರಶ್ನೆಗಳ ಪೈಕಿ 80 ಪ್ರಶ್ನೆಗಳ ಉತ್ತರಗಳನ್ನು ಮತ್ತು ಈ ದಿನದ 15 ಪ್ರಶ್ನೆಗಳ ಪೈಕಿ 13 ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 151 ಪ್ರಶ್ನೆಗಳ ಪೈಕಿ 80 ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತೇನೆ.